**<u>ಸಾಕ್ಷಿಯನ್ನು ದಿನಾಂಕಃ 28.07.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಪಿ ಆರ್ ಡಿ ವಕೀಲರಿಂದ:</u>**

ಎರಡನೇ ಪ್ರತಿವಾದಿ ಗೌರವಾನ್ವಿತ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿರುವ ಆರ್ ಎಸ್ ಎ ನಂ.1132/2020 ರಲ್ಲಿ ನನ್ನನ್ನು ಪಾರ್ಟಿಯನ್ನಾಗಿ ಮಾಡಲಾಗಿದೆ ಎಂದರೆ ಸರಿ. ಸದರಿ ಆರ್ ಎಸ್ ಎ ನಲ್ಲಿ ದಾವಾ ಆಸ್ತಿಯ ಸ್ವರೂಪವನ್ನು ಬದಲಾಯಿಸಬಾರದು ಮತ್ತು ದಾವಾ ಆಸ್ತಿಯನ್ನು ಮಾರಾಟ ಮಾಡಬಾರದು ಎಂದು ಆದೇಶವಿದೆ ಎಂದರೆ ಸರಿ. ಸದರಿ ಆರ್ ಎಸ್ ಎ ಅನ್ನು 2ನೇ ಪ್ರತಿವಾದಿ ಏಕೆ ದಾಖಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ.

2. 1ನೇ ಪ್ರತಿವಾದಿ ನಮ್ಮ ಮತ್ತು ಇತರರ ವಿರುದ್ಧ ಅವರ ಸ್ವಾಧೀನಕ್ಕೆ ತೊಂದರೆ ನೀಡಿದ್ದೇವು ಎಂದು ದೂರು ದಾಖಲಿಸಿದ್ದರು ಎಂದರೆ ಸಾಕ್ಷಿಯು ತಾವು ಸ್ವಾಧೀನದಲ್ಲಿದ್ದು, ಅವರೇ ತೊಂದರೆ ನೀಡಿದ್ದರು, ಪೊಲೀಸರು ತಮ್ಮ ದೂರನ್ನು ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ಪೊಲೀಸರು ನಮ್ಮ ಮತ್ತು ಇತರರ ವಿರುದ್ಧ Crime No.66/2026 ಅನ್ನು ದಾಖಲಿಸಿರುತ್ತಾರೆ ಎಂದರೆ ಸರಿ.

3. ದಾವಾ ಆಸ್ತಿ ಮೂಲತಃ ಬೋರಮ್ಮ ಅಲಿಯಾಸ್ ಪುಟ್ಟಬೋರಮ್ಮ ನವರಿಗೆ ವಿಭಾಗ ಪತ್ರದಂತೆ ಬಂದ ಆಸ್ತಿ ಎಂದರೆ ಸರಿ. ಸದರಿ ಬೋರಮ್ಮ ಅಲಿಯಾಸ್ ಪುಟ್ಟಬೋರಮ್ಮ 2ನೇ ಪ್ರತಿವಾದಿಯ ಅಕ್ಕ ಎಂದರೆ ಸರಿ. ಬೋರಮ್ಮ ಅಲಿಯಾಸ್ ಪುಟ್ಟಬೋರಮ್ಮ 2ನೇ ಪ್ರತಿವಾದಿ ಮತ್ತು ಅವರ ಗಂಡನಿಗೆ ದಿನಾಂಕ 30.01.2006 ರಲ್ಲಿ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದರು ಎನ್ನುವ ವಿಚಾರ ಗೊತ್ತೇ ಎಂದರೆ ಸಾಕ್ಷಿಯು ಆ ರೀತಿ ಬರೆದುಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ, ಸದರಿ ದಾಖಲೆಯನ್ನು ನಾನು ನೋಡಿರಲಿಲ್ಲ. ಸದರಿ ಕರಾರಿನಲ್ಲಿ ಸ್ವತ್ತುಗಳ ಸ್ವಾಧೀನವನ್ನು

ಬೋರಮ್ಮ ಅಲಿಯಾಸ್ ಪುಟ್ಟಬೋರಮ್ಮ ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಕರಾರು ಆದ ನಂತರ ಬೋರಮ್ಮ ಅಲಿಯಾಸ್ ಪುಟ್ಟಬೋರಮ್ಮ ನಮ್ಮ ಪೂರ್ವ ಮಾಲೀಕರಿಗೆ ಕ್ರಯಪತ್ರ ಬರೆದುಕೊಟ್ಟಿದ್ದ ವಿಚಾರ ಗೊತ್ತೇ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

4. ನಾನು ಖರೀದಿ ಪೂರ್ವದಲ್ಲಿ ದಾಖಲೆಗಳನ್ನು ಪರಿಶೀಲಿಸಿದ್ದೆ ಮತ್ತು ವಕೀಲರ ಮೂಲಕ ಅಭಿಪ್ರಾಯ ಪಡೆದಿದ್ದೆ. ನಮ್ಮ ಪೂರ್ವ ಮಾಲೀಕರು ದಾವಾ ಆಸ್ತಿಯ ಬಗ್ಗೆ ಯಾವುದು ತಗಾದೆ ಇಲ್ಲ ಎಂದು ತಿಳಿಸಿದ್ದರು.

5. 2ನೇ ಪ್ರತಿವಾದಿ ಬೋರಮ್ಮ ಅಲಿಯಾಸ್ ಪುಟ್ಟಬೋರಮ್ಮ ಕ್ರಯಪತ್ರ ಬರೆದುಕೊಡದ ಕಾರಣ, ಅಸಲು ದಾವಾ ಸಂ.37/2006 ಅನ್ನು ಕರಾರಿನ ನಿರ್ದಿಷ್ಟ ಪಾಲನೆಗಾಗಿ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಪ್ರತಿವಾದಿ ಏನು ತಕರಾರು ಸಲ್ಲಿಸಿದ್ದಾರೆ ಮತ್ತು ಏನು ದಾಖಲೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ಪೂರ್ವ ಮಾಲೀಕರು ಶಾಶ್ವತ ನಿರ್ಬಂಧಕಾಜ್ಞೆ ಸಲ್ಲಿಸಿದ್ದ ದಾವೇ ಸಂ.12/2008 ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೇ ವಜಾ ಆದರೂ ನನಗೆ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ಬೋರಮ್ಮ ಅಲಿಯಾಸ್ ಪುಟ್ಟಬೋರಮ್ಮ ಬರೆದುಕೊಟ್ಟ ಕರಾರಿನಡಿ ಸ್ವಾಧೀನವನ್ನು ಪ್ರತಿವಾದಿಗಳಿಗೆ ಬಿಟ್ಟುಕೊಟ್ಟಿದ್ದು, ಪ್ರತಿವಾದಿಗಳೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಅಸಲು ದಾವಾ ಸಂ.37/2006 ರಲ್ಲಿ ವಾದಿಗಳು ನೀಡಿದ್ದ ರೂ.20,000/- ಗಳನ್ನು ಬಡ್ಡಿ ಸಮೇತ ಬೋರಮ್ಮ ಅಲಿಯಾಸ್ ಪುಟ್ಟಬೋರಮ್ಮ ನವರಿಗೆ ಹಿಂದಿರುಗಿಸಬೇಕು ಎಂದು

ಆದೇಶವಾಗಿತ್ತು ಎಂದರೆ ಸರಿಯಲ್ಲ. ಸದರಿ ತೀರ್ಪನ್ನು ಈ ದಾವೇಯ ಪ್ರತಿವಾದಿಗಳು ಆರ್ ಎ ನಂ.117/2011 ನ್ನು ಸಲ್ಲಿಸಿ ಪ್ರಶ್ನೆ ಮಾಡಿದ್ದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಅದೇ ರೀತಿ ಬೋರಮ್ಮ ಅಲಿಯಾಸ್ ಪುಟ್ಟಬೋರಮ್ಮ 177/2011 ಕ್ರಾಸ್ ಅಪೀಲು ಹಾಕಿದ್ದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ಅದರ ಕಾಪಿ ಪರಿಶೀಲಿಸಿ ನಂತರ ಖರೀದಿಸಿರುವುದಾಗಿ ಎಂದು ನುಡಿಯುತ್ತಾರೆ. ನಾನು ಆ ರೀತಿ ಕಾಪಿ ಪರಿಶೀಲಿಸಿದ ಬಗ್ಗೆ ನಮ್ಮ ವಕೀಲರಿಗೆ ಹೇಳಿ ದಾವೇಯಲ್ಲಿ ಬರೆಸಿರುತ್ತೇನೆ. ನಾನು ಸದರಿ ವಿಚಾರವನ್ನು ಪ್ರಥಮ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರ್ ಎ ನಂ.117/2011 ಭಾಗಶಃ ಪುರಸ್ಕಾರಗೊಂಡು ಐಟಂ ನಂ.3ಕ್ಕೆ ಕ್ರಯಪತ್ರ ಬರೆದುಕೊಡಬೇಕು ಎಂದು ಆದೇಶವಾಗಿತ್ತು ಎಂದರೆ ಸಾಕ್ಷಿಯು 3ನೇ ಐಟಂಗೂ ತಮಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

7. ವಿವಾದವಿರುವ ಆಸ್ತಿಯನ್ನು ಖರೀದಿ ಮಾಡುವ ಅಭ್ಯಾಸವಿದೆಯೇ ಎಂದರೆ ಸಾಕ್ಷಿಯು ತಾನು ಖರೀದಿ ಮಾಡಿದ ಆಸ್ತಿಗೆ ವಿವಾದ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ವಿವಾದ ಇರುವ ಬಗ್ಗೆ ನನಗೆ ಇದ್ದ ಕಾರಣ, ಆರ್ ಎಸ್ ಎ ನಂ.1132/2020 ರಲ್ಲಿ ನನ್ನನ್ನು ದಿನಾಂಕ 02.08.2021 ರಲ್ಲಿ ಸೇರ್ಪಡೆಗಾಗಿ ಅರ್ಜಿ ಹಾಕಲಾಗಿತ್ತು ಎಂದರೆ ಸಾಕ್ಷಿಯು 2022 ರಲ್ಲಿ ಸೇರಿಸಲಾಗಿತ್ತು ಎಂದು ನುಡಿಯುತ್ತಾರೆ. ಸದರಿಯಂತೆ ನನ್ನನ್ನು ಸೇರ್ಪಡೆ ಮಾಡಿದ ನಂತರ ದಿನಾಂಕ 28.01.2022 ರಂದು ಈ ದಾವೇ ಸಲ್ಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ತೊಂದರೆ ಮಾಡಿದ ಕಾರಣ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

8. ಈ ದಾವೇಯಲ್ಲಿ ಆರ್ ಎಸ್ ಎ ನಂ.1132/2020 ನನ್ನನ್ನು ಸೇರಿಸಿರುವ ಬಗ್ಗೆ ತಿಳಿಸಿರುತ್ತೇನೆ. ಪ್ರತಿವಾದಿಗಳ ಕರಾರಿನಂತೆ ಸ್ವಾಧೀನದಲ್ಲಿದ್ದರೂ ಅವರಿಗೆ ತೊಂದರೆ ನೀಡಿದ

ಕಾರಣ, ಪ್ರತಿವಾದಿಗಳು ಈ ದಾವೇಯಲ್ಲಿ ಎದುರು ಕ್ಲೇಮು ಮಾಡಿರುತ್ತಾರೆ ಎಂದರೆ ಸರಿಯಲ್ಲ.

9. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು ತಿಪ್ಪೆ ಮತ್ತು ಹುಲ್ಲು ಹಾಕಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹಾಕಲು ಬಂದಿದ್ದರು, ತಾವು ಹಾಕಿಸಲಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿದ್ದಾರೇ ಎಂದರೆ ಸಾಕ್ಷಿಯು ಶಿವಮ್ಮ ಸ್ವಾಧೀನದಲ್ಲಿದ್ದರು ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು ಹಾಕಿದ್ದ ತಿಪ್ಪೆ ಮತ್ತು ಹುಲ್ಲನ್ನು ನಾವು ಜೆಸಿಬಿ ಮೂಲಕ ತೆರವುಗೊಳಿಸಿದ ಕಾರಣ, ನಮ್ಮ ವಿರುದ್ದ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 12.02.2022 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ನಾವು ಪ್ರತಿವಾದಿಗಳ ಸ್ವಾಧೀನಕ್ಕೆ ತೊಂದರೆ ನೀಡಿದ್ದೆ ಎಂದರೆ ಸರಿಯಲ್ಲ. ನಾನು ತಗಾದೆ ಇರುವ ಆಸ್ತಿಗಳನ್ನು ಖರೀದಿಸುವ ಅಭ್ಯಾಸ ಇಟ್ಟುಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಎಂದಿಗೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

*<u>( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)</u>*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.